217

# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 451
2. ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 14/08/2025
4. ಉತ್ತರಿಸಲಿರುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| 1. (ಅ) | ರಾಜ್ಯ ಸರ್ಕಾರ ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರನ್ನಾಗಿ ಇದುವರೆವಿಗೆ ಯಾರು ಯಾರನ್ನು ನೇಮಿಸಿದೆ: (ಅಧ್ಯಕ್ಷರ ಹೆಸರು, ನೇಮಿಸಿದ ದಿನಾಂಕ, ಒಟ್ಟು ಅವಧಿ ಸೇರಿದಂತೆ ಸಂಪೂರ್ಣ ಮಾಹಿತಿ ನೀಡುವುದು) | **1.ಶ್ರೀ ಹಾರನಹಳ್ಳಿ ರಾಮಸ್ವಾಮಿ**<br>ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 19 ಎಎಂಸಿ 200, ದಿನಾಂಕ: 17.04.2000 ರಲ್ಲಿ ನೇಮಿಸಿದೆ.<br>ಕಾರ್ಯನಿರ್ವಹಿಸಿದ ಅವಧಿ: 2000ನೇ ಇಸವಿಯಿಂದ 2001 ರವರೆಗೆ.<br>**2. ಶ್ರೀ ಟಿ.ಎಂ. ವಿಜಯಭಾಸ್ಕರ್,**<br>ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ (ಆಸು) 05 ಅಸಪ 2020, ದಿನಾಂಕ: 7.1.2021 ರಲ್ಲಿ ನೇಮಿಸಿದೆ.<br>ಕಾರ್ಯನಿರ್ವಹಿಸಿದ ಅವಧಿ: ದಿನಾಂಕ: 11.1.2021 ರಿಂದ 30.11.2023.<br>**3. ಶ್ರೀ ಆರ್.ವಿ ದೇಶಪಾಂಡೆ**<br>ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 151 ಶಿಸನೇ 2023, ದಿನಾಂಕ: 29.12.2023.<br>ಕಾರ್ಯ ನಿರ್ವಹಿಸಿದ ಅವಧಿ: ಜನವರಿ 2024 ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ. |
| (ಆ) | ಕರ್ನಾಟಕ ಆಡಳಿತ ಸುಧಾರಣಾ ಆಯೋಗ 1 ಮತ್ತು 2 ರ ಎಷ್ಟು ವರದಿಗಳು ಸರ್ಕಾರಕ್ಕೆ ಇದುವರೆವಿಗೂ ಸ್ವೀಕೃತವಾಗಿದೆ; (ವರದಿ ಸಲ್ಲಿಸಿದ ಆಯೋಗದ ಅಧ್ಯಕ್ಷರು, ವರದಿ ಸ್ವೀಕರಿಸಿದವರು ಮತ್ತು ವರದಿ ಸಲ್ಲಿಸಿದ ದಿನಾಂಕ, ಸಲ್ಲಿಕೆಯಾದ ವರದಿವಾರು ಮಾಹಿತಿ ನೀಡುವುದು) | ಮೊದಲನೇ ಆಯೋಗವು ಒಂದು ವರದಿಯನ್ನು ಡಿಸೆಂಬರ್ 2001ರಲ್ಲಿ ಹಾಗೂ ಎರಡನೆಯ ಆಯೋಗವು 8 ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ.<br>ಮೊದಲನೇ ಆಯೋಗದ ಅಧ್ಯಕ್ಷರಾದ ಶ್ರೀ ಹಾರನಹಳ್ಳಿ ರಾಮಸ್ವಾಮಿ ರವರು ಮೊದಲನೇ ವರದಿಯನ್ನು ಸನ್ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಎಸ್.ಎಂ. ಕೃಷ್ಣ ರವರಿಗೆ 2001ನೇ ಇಸವಿಯಲ್ಲಿ ಸಲ್ಲಿಸಲಾಗಿದೆ.<br>ಎರಡನೇ ಆಯೋಗದ ಅಧ್ಯಕ್ಷರಾದ ಶ್ರೀ ಟಿ.ಎಂ. ವಿಜಯ್ ಭಾಸ್ಕರ್, ನಿವೃತ್ತ ಐ.ಎ.ಎಸ್ ಹಾಗೂ ಹಿಂದಿನ ಸರ್ಕಾರದ ಮುಖ್ಯ ಕಾರ್ಯದರ್ಶಿ ರವರು ಏಳು ವರದಿಗಳನ್ನು ಸಲ್ಲಿಸಿದ್ದು, ಮೊದಲನೇ ವರದಿಯನ್ನು ದಿನಾಂಕ: 3.7.2021ರಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಯವರಾದ ಶ್ರೀ ಯಡಿಯೂರಪ್ಪ ರವರಿಗೆ ಸಲ್ಲಿಸಲಾಗಿದೆ.<br>ತರುವಾಯ ಎರಡನೇ ಮತ್ತು ಮೂರನೇ ವರದಿಗಳನ್ನು ಸನ್ಮಾನ್ಯ ಮುಖ್ಯ ಮಂತ್ರಿಯವರಾದ ಶ್ರೀ ಬಸವರಾಜ ಬೊಮ್ಮಾಯಿ ರವರಿಗೆ ದಿನಾಂಕ: 18.02.2022 ರಲ್ಲಿ ಸಲ್ಲಿಸಲಾಗಿದೆ. |

| | | |
|---|---|---|
| | | ನಂತರ ನಾಲ್ಕನೇ ಮತ್ತು ಐದನೇ ವರದಿಗಳನ್ನು ದಿನಾಂಕ:3.2.2023 ರಂದು ಸನ್ಮಾನ್ಯ ಮುಖ್ಯ ಮಂತ್ರಿಯವರಾದ ಶ್ರೀ ಬಸವರಾಜ ಬೊಮ್ಮಾಯಿರವರಿಗೆ ಸಲ್ಲಿಸಿದೆ.<br><br>ಆರನೇ ವರದಿಯನ್ನು ದಿನಾಂಕ: 25.11.2023 ರಂದು ಹಾಗೂ ಏಳನೇ ವರದಿಯನ್ನು ದಿನಾಂಕ: 2.2.2024 ರಂದು ಸನ್ಮಾನ್ಯ ಮುಖ್ಯ ಮಂತ್ರಿಯವರಾದ ಶ್ರೀ ಸಿದ್ದರಾಮಯ್ಯ ರವರಿಗೆ ಸಲ್ಲಿಸಿದೆ.<br><br>ಎರಡನೇ ಆಯೋಗದ ಅಧ್ಯಕ್ಷರಾದ ಶ್ರೀ ಆರ್.ವಿ ದೇಶಪಾಂಡೆರವರು ದಿನಾಂಕ: 22.05.2025ರಂದು ಎಂಟನೇ ವರದಿಯನ್ನು ಸನ್ಮಾನ್ಯ ಮುಖ್ಯ ಮಂತ್ರಿಯವರಾದ ಶ್ರೀ ಸಿದ್ದರಾಮಯ್ಯ ರವರಿಗೆ ಸಲ್ಲಿಸಿರುತ್ತಾರೆ. |
| (ಇ) | ಸರ್ಕಾರಕ್ಕೆ ಸಲ್ಲಿಕೆಯಾದ ಆಡಳಿತ ಸುಧಾರಣಾ ಆಯೋಗ-1 ಮತ್ತು 2 ರ 'ವರದಿ' ಗಳಲ್ಲಿ ಇಲಾಖಾವಾರು ಮಾಡಲಾದ ಶಿಫಾರಸ್ಸುಗಳ ಒಟ್ಟು ಸಂಖ್ಯೆ ಎಷ್ಟು? ಈ ಪೈಕಿ ಅನುಷ್ಠಾನಗೊಂಡ, ಅನುಷ್ಠಾನದ ಹಂತದಲ್ಲಿರುವ ಹಾಗೂ ಕಾರ್ಯಗತಗೊಳಿಸಲು ಸಾಧ್ಯವಿಲ್ಲದ ಶಿಫಾರಸ್ಸುಗಳ ಒಟ್ಟು ಸಂಖ್ಯೆ ಎಷ್ಟು? (ಸಂಪೂರ್ಣ ಮಾಹಿತಿ ನೀಡುವುದು) | ಸರ್ಕಾರಕ್ಕೆ ಸಲ್ಲಿಕೆಯಾದ ಆಡಳಿತ ಸುಧಾರಣಾ ಆಯೋಗ-1 ರ ಮೊದಲನೇ ವರದಿಯಲ್ಲಿ 481 ಅಂತಿಮ ಹಾಗೂ 246 ಮಧ್ಯಂತರ ಶಿಫಾರಸ್ಸುಗಳನ್ನು ಮಾಡಲಾಗಿದ್ದು, ಇವುಗಳ ಪೈಕಿ 462 ಶಿಫಾರಸ್ಸುಗಳು ಅನುಷ್ಠಾನಗೊಂಡಿದ್ದು, 216 ಶಿಫಾರಸ್ಸುಗಳು ಅನುಷ್ಠಾನದ ಹಂತದಲ್ಲಿರುತ್ತವೆ ಹಾಗೂ 49 ಶಿಫಾರಸ್ಸುಗಳನ್ನು ಅಂಗೀಕರಿಸಿರುವುದಿಲ್ಲ.<br><br>ಆಡಳಿತ ಸುಧಾರಣಾ ಆಯೋಗ - 2 ರ ಒಟ್ಟು ಏಳು ವರದಿಗಳಲ್ಲಿ ಇಲಾಖಾವಾರು ಮಾಡಲಾದ ಶಿಫಾರಸ್ಸುಗಳ ಒಟ್ಟು ಸಂಖ್ಯೆ 5039. ಅವುಗಳಲ್ಲಿ<br><br>1.ಅನುಷ್ಠಾನಗೊಂಡ ಶಿಫಾರಸ್ಸುಗಳು - 1576<br>2.ಅನುಷ್ಠಾನದ ಹಂತದಲ್ಲಿರುವವು – 944<br>3.ಕಾರ್ಯಗತಗೊಳಿಸಲು ಸಾಧ್ಯವಿಲ್ಲದವು – 362<br>4. ಪರಿಶೀಲನೆಯಲ್ಲಿರುವ ಶಿಫಾರಸುಗಳು - 2157 |
| (ಈ) | ಆಯೋಗವು ಮಾಡಿದ ಕೆಲವು ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಾಗದಿರುವುದಕ್ಕೆ ಕಾರಣಗಳೇನು? | 1.ಕೆಲವು ಶಿಫಾರಸ್ಸುಗಳಿಗೆ ಒಂದಕ್ಕಿಂತ ಹೆಚ್ಚು ಇಲಾಖೆಗಳ ಸಮನ್ವಯದ ಅವಶ್ಯಕತೆ ಇರುತ್ತದೆ.<br>2.ಕೆಲವು ಶಿಫಾರಸ್ಸುಗಳಿಗೆ ಆಯವ್ಯಯದ ಅವಕಾಶ ಕಲ್ಪಿಸಬೇಕಾಗಿರುತ್ತದೆ.<br>3. 362 ಶಿಫಾರಸ್ಸುಗಳನ್ನು ಇಲಾಖೆಗಳು ಒಪ್ಪಿರುವುದಿಲ್ಲ. |
| (ಉ) | ಕರ್ನಾಟಕ ಆಡಳಿತ ಸುಧಾರಣಾ ಆಯೋಗ (1 ಮತ್ತು 2) ಗಳಿಗೆ ಈವರೆವಿಗೂ ನೀಡಿರುವ ಅನುದಾನ ಎಷ್ಟು? (ವಿವರ ನೀಡುವುದು) | ಅನುಬಂಧ ಲಗತ್ತಿಸಿದೆ. |

**ಸಂಖ್ಯೆ:ಸಿಆಸುಇಆಸು/12/ಅಸವ/2025**

(ಸಿದ್ದರಾಮಯ್ಯ)
ಮುಖ್ಯ ಮಂತ್ರಿ

<u>**ಅನುಬಂಧ -1**</u>

ಕರ್ನಾಟಕ ಆಡಳಿತ ಸುಧಾರಣಾ ಆಯೋಗ (1 ಮತ್ತು 2) ಗಳಿಗೆ ಈವರೆಗೂ ನೀಡಿರುವ ಅನುದಾನದ ವಿವರ;

(ರೂ. ಲಕ್ಷಗಳಲ್ಲಿ)

| **ವರ್ಷ** | **ಒದಗಿಸಿದ ಅನುದಾನ (ಹೆಚ್ಚುವರಿ ಅನುದಾನ ಒಳಗೊಂಡಂತೆ)** |
|---|---|
| ಆಡಳಿತ ಸುಧಾರಣಾ ಆಯೋಗ-1 ಕ್ಕೆ ಒದಗಿಸಿದ ಅನುದಾನ | 53.90 |
| ಆಡಳಿತ ಸುಧಾರಣಾ ಆಯೋಗ-2 ಕ್ಕೆ ಒದಗಿಸಿದ ಅನುದಾನದ ವಿವರ: | |
| 2021-22 | 175.97 |
| 2022-23 | 207.18 |
| 2023-24 | 183.74 |
| 2024-25 | 255.39 |
| 2025-26 | 265.20 |

# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 498**

**ಮಾನ್ಯ ಸದಸ್ಯರ ಹೆಸರು : ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ**

**ಉತ್ತರಿಸುವ ದಿನಾಂಕ : 14/08/2025**

**ಉತ್ತರಿಸುವ ಸಚಿವರು : ಗೃಹ ಸಚಿವರು**

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಸೈಬರ್ ಅಪರಾಧ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಜನರು ಕೋಟ್ಯಾಂತರ ರೂಪಾಯಿ ಹಣ ಕಳೆದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಹಲವಾರು ಪ್ರಕರಣಗಳು ಸಂಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಹೌದು, ಗಮನಕ್ಕೆ ಬಂದಿರುತ್ತದೆ.</td></tr>
<tr><td>ಆ)</td><td>ಬಂದಿದ್ದಲ್ಲಿ, ಪ್ರಸ್ತುತ 2024-25 ಮತ್ತು 2025-26ನೇ ಸಾಲಿನಲ್ಲಿ ಒಟ್ಟು ಎಷ್ಟು ಸೈಬರ್ ಅಪರಾಧ ಪ್ರಕರಣಗಳು ದಾಖಲಾಗಿವೆ; (ಜಿಲ್ಲಾವಾರು ವಿವರ ನೀಡುವುದು)</td><td>ರಾಜ್ಯದಲ್ಲಿ 2024 ಮತ್ತು 2025ನೇ ಸಾಲಿನ ಜುಲೈವರೆಗೆ ದಾಖಲಾಗಿರುವ ಸೈಬರ್ ಅಪರಾಧಗಳ ಸಂಖ್ಯೆ ಈ ಕೆಳಕಂಡಂತಿದೆ.<br><table><tr><th>ವರ್ಷ</th><th>ದಾಖಲಿಸಿರುವ ಸೈಬರ್ ಅಪರಾಧ ಪ್ರಕರಣಗಳ ಸಂಖ್ಯೆ</th></tr><tr><td>2024</td><td>22472</td></tr><tr><td>2025 (ಜುಲೈ)</td><td>8620</td></tr></table><br>ಸೈಬರ್ ಅಪರಾಧ ಪ್ರಕರಣಗಳ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.</td></tr>
<tr><td>ಇ)</td><td>ಸದರಿ ದಾಖಲಾದ ಪ್ರಕರಣಗಳಲ್ಲಿ ವಂಚಕರಿಂದ ಸಾರ್ವಜನಿಕರು ಕಳೆದುಕೊಂಡಿರುವ ಹಣದ ವಿವರಗಳೇನು; (ಜಿಲ್ಲಾವಾರು ವಿವರ ನೀಡುವುದು)</td><td>ಸೈಬರ್ ವಂಚನೆಯಿಂದ ಸಾರ್ವಜನಿಕರು ಕಳೆದು ಕೊಂಡ ಹಣದ ವಿವರಗಳು ಈ ಕೆಳಕಂಡಂತಿವೆ.<br>ಸೈಬರ್ ಅಪರಾಧ ಪ್ರಕರಣಗಳು ಜಿಲ್ಲಾವಾರು<br><table><tr><th>ವರ್ಷ</th><th>ಸೈಬರ್ ವಂಚನೆಯಿಂದ ಸಾರ್ವಜನಿಕರು ಕಳೆದು ಕೊಂಡ ಹಣದ ವಿವರ ರೂ.ಗಳಲ್ಲಿ</th></tr><tr><td>2024</td><td>2,515,48,49,720</td></tr><tr><td>2025 (ಜುಲೈ)</td><td>1,287,50,89,854</td></tr></table><br>ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.</td></tr>
</table>

<table>
<tr>
<td>ಈ)</td>
<td>ಸದರಿ ಎಷ್ಟು ಪ್ರಕರಣಗಳಲ್ಲಿ ವಂಚನೆಯ ಎಷ್ಟು ಮೊತ್ತದ ಹಣವನ್ನು ಇದುವರೆಗೆ ವಶಪಡಿಸಿಕೊಳ್ಳಲಾಗಿದೆ ಮತ್ತು ಎಷ್ಟು ಪ್ರಕರಣಗಳಲ್ಲಿ ಇದುವರೆಗೆ ವಂಚಕರಿಗೆ ಶಿಕ್ಷೆಯಾಗಿದೆ;</td>
<td>ಸೈಬರ್ ವಂಚನೆಯ ಪ್ರಕರಣಗಳಲ್ಲಿ ವಶಪಡಿಸಿಕೊಳ್ಳಲಾದ ಮೊತ್ತ ಮತ್ತು ಇದುವರೆಗೆ ವಂಚಕರಿಗೆ ಶಿಕ್ಷೆಯಾಗಿರುವವರ ಸಂಖ್ಯೆ ಈ ಕೆಳಕಂಡಂತಿದೆ.<br>
<table>
<tr><th>ವರ್ಷ</th><th>ಸೈಬರ್ ವಂಚನೆಯಲ್ಲಿ ವಶಪಡಿಸಿಕೊಳ್ಳಲಾದ ಮೊತ್ತ ರೂ.ಗಳಲ್ಲಿ</th><th>ಶಿಕ್ಷೆಯಾದ ವಂಚಕರ ಸಂಖ್ಯೆ</th></tr>
<tr><td>2024</td><td>3,46,22,09,274</td><td>16</td></tr>
<tr><td>2025 (ಜುಲೈ)</td><td>1,09,36,47,238</td><td>7</td></tr>
</table>
</td>
</tr>
<tr>
<td>ಉ)</td>
<td>ರಾಜ್ಯದಲ್ಲಿ ಸೈಬರ್ ಕ್ರೈಂ ಪ್ರಕರಣಗಳು ವ್ಯಾಪಕವಾಗಿ ಮತ್ತು ನಿರಂತವಾಗಿ ನಡೆಯುತ್ತಿದ್ದು ಅವುಗಳನ್ನು ನಿಯಂತ್ರಣಕ್ಕೆ ತರಲು ಸರ್ಕಾರ ಇದುವರೆಗೆ ವಿಫಲವಾಗಿರಲು ಕಾರಣಗಳೇನು;</td>
<td>ರಾಜ್ಯ ಸರ್ಕಾರವು ಸೈಬರ್ ಕ್ರೈಂ ಪ್ರಕರಣಗಳನ್ನು ತಡೆಗಟ್ಟುವಲ್ಲಿ ಹಾಗೂ ನಿಯಂತ್ರಿಸುವಲ್ಲಿ ವಿಫಲವಾಗಿರುವುದಿಲ್ಲ.</td>
</tr>
<tr>
<td>ಊ)</td>
<td>ರಾಜ್ಯದಲ್ಲಿ ವ್ಯಾಪಕವಾಗಿ ನಡೆಯುತ್ತಿರುವ ಸೈಬರ್ ಕ್ರೈಂ ಪ್ರಕರಣಗಳನ್ನು ಶಾಶ್ವತವಾಗಿ ತಡೆಯಲು ಹಾಗೂ ಅಮಾಯಕರು ಮತ್ತು ಮುಗ್ದರು ಈ ವಂಚನೆಯ ಜಾಲಕ್ಕೆ ಸಿಲುಕಿ ಸಂಕಷ್ಟಕ್ಕೀಡಾಗುತ್ತಿರುವುದನ್ನು ತಪ್ಪಿಸಲು ಸರ್ಕಾರ ಕೈಗೊಳ್ಳಲಿರುವ ಕಠಿಣ ಕ್ರಮಗಳೇನು?</td>
<td>ಸೈಬರ್ ಪ್ರಕರಣಗಳನ್ನು ನಿಯಂತ್ರಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.<br>
➢ ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳ ಬಳಕೆಯಿಂದ ಸಾರ್ವಜನಿಕರಲ್ಲಿ ಇಂಟರ್‌ನೆಟ್ ಬಳಕೆ ಹೆಚ್ಚಿದ್ದು ಇದರ ಪ್ರಯೋಜನವನ್ನು ಪಡೆಯುತ್ತಿರುವ ಸೈಬರ್ ವಂಚಕರು ವಿವಿಧ ಸ್ಥಳಗಳಲ್ಲಿ ಸಾರ್ವಜನಿಕರನ್ನು ವಂಚಿಸುತ್ತಿರುವುದು ವರದಿಯಾಗುತ್ತಿವೆ. ಈ ಪ್ರಕರಣಗಳನ್ನು ನಿಯಂತ್ರಿಸಿ ಸಾರ್ವಜನಿಕರ ಹಣ ದುರುಪಯೋಗವಾಗದಂತೆ ಮತ್ತು ವಂಚನೆಗೊಳಗಾಗದಂತೆ ಮುಂಜಾಗ್ರತೆ ಕ್ರಮ ವಹಿಸಲಾಗುತ್ತಿದೆ.<br>
➢ ರಾಜ್ಯದಲ್ಲಿ ಸೈಬರ್ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನಲೆಯಲ್ಲಿ ಡಿಸೆಂಬರ್ 2021 ರಿಂದ ಕೇಂದ್ರ ಸರ್ಕಾರದ ಗೃಹ ಸಚಿವಾಲಯದ ಸಹಯೋಗದೊಂದಿಗೆ ಎನ್.ಸಿ.ಆರ್.ಪಿ (National Cyber Crime Reporting Portal) ಸಹಾಯವಾಣಿ ಸಂಖ್ಯೆ 1930 ಸೃಜಿಸಿ ಸದರಿ ವ್ಯವ್ಯಸ್ಥೆಯಡಿ ರಾಜ್ಯದಲ್ಲಿ ವರದಿಯಾಗುತ್ತಿರುವ ದೂರುಗಳಿಗೆ ಸಂಬಂಧಿಸಿದಂತೆ ಆನ್‌ಲೈನ್ ಮುಖಾಂತರ ಅಕ್ರಮ ವರ್ಗಾವಣೆಯಾದ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲಾಗುತ್ತಿದೆ.<br>
➢ ರಾಜ್ಯದಲ್ಲಿರುವ ಸೈಬರ್ ಠಾಣೆಗಳ ಮೇಲುಸ್ತುವಾರಿಗಾಗಿ ಡಿ.ಜಿ.ಪಿ ಸೈಬರ್ ಕಮಾಂಡ್ ಹುದ್ದೆಯನ್ನು ಸೃಜಿಸಲಾಗಿದೆ.</td>
</tr>
</table>

| | | |
|---|---|---|
| | | ➢ ಸೈಬರ್ ವಂಚನೆ ಪ್ರಕರಣಗಳನ್ನು ತ್ವರಿತ ಗತಿಯಲ್ಲಿ ತನಿಖೆ ಮಾಡಿ ಸಾರ್ವಜನಿಕರಿಗೆ ಅಕ್ರಮ ನಷ್ಟ ತಪ್ಪಿಸುವ ಸಲುವಾಗಿ ರಾಜ್ಯದಲ್ಲಿ ಹೊಸದಾಗಿ 43 ಸೈಬರ್ ಕ್ರೈಂ ಪೊಲೀಸ್ ಠಾಣೆಗಳನ್ನು(CEN) ಸೃಜಿಸಲಾಗಿದ್ದು, ಗುಣಮಟ್ಟದ ತನಿಖೆಗಾಗಿ Dy.S.P ದರ್ಜೆಯ ಅಧಿಕಾರಿಗಳನ್ನು ಎಸ್.ಹೆಚ್.ಓ ಗಳನ್ನಾಗಿ ನೇಮಕ ಮಾಡಲಾಗಿರುತ್ತದೆ.<br>➢ ಪೊಲೀಸ್ ಇಲಾಖೆಯು ಕೇಂದ್ರ ಹಾಗೂ ಸರ್ಕಾರದ ಇತರೆ ಸಹಭಾಗಿತ್ವ ಇಲಾಖೆಗಳಾದ RBI, DOTC, CERT-IN, MHA ಮತ್ತು ಎಲ್ಲಾ ಇತರ ಬ್ಯಾಂಕಿಂಗ್ ಹಾಗೂ ಹಣಕಾಸು ವ್ಯವಸ್ಥೆಯೊಂದಿಗೆ ಸಮನ್ವಯ ಸಾಧಿಸಿ ನಿರಂತರ ಸಂಪರ್ಕದಲ್ಲಿದ್ದು, ಸೈಬರ್ ಅಪರಾಧಗಳಲ್ಲಿ ಭಾಗಿಯಾದ ಬ್ಯಾಂಕ್ ಖಾತೆಗಳ / ಮೊಬೈಲ್ ಸಿಮ್ ಕುರಿತು ಮಾಹಿತಿಯನ್ನು ಪಡೆದು ಕ್ರಮಕೈಗೊಳ್ಳಲಾಗುತ್ತಿದೆ.<br>➢ ಹೊಸ ಮಾದರಿಯ ಆನ್-ಲೈನ್, ಸೈಬರ್ ವಂಚನೆಗಳ ತ್ವರಿತ ಮತ್ತು ತಾರ್ಕಿಕ ತನಿಖೆಯನ್ನು ಕೈಗೊಳ್ಳುವ ಸಲುವಾಗಿ ತನಿಖಾ ಕೈಪಿಡಿಯನ್ನು (New Cyber Investigation Manual) ಪ್ರಕಟಿಸಲಾಗಿದೆ.<br>➢ ಸೈಬರ್ ಕ್ರೈಂ ಅಪರಾಧಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವಲ್ಲಿ ಬಹಳಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಎಲ್ಲಾ ವರ್ಗದ ಜನಗಳಿಗೂ ಸಾಮಾಜಿಕ ಜಾಲತಾಣಗಳಾದ ಫೇಸ್ ಬುಕ್, ಎಫ್.ಎಂ, ವಾಟ್ಸಆಪ್ ಹಾಗೂ ಟ್ವೀಟರ್‌ಗಳ ಮೂಲಕ ಎಲ್ಲಾ ಮಾಧ್ಯಮಗಳ ಮುಖಾಂತರ ಸಹ ಸಾಮಾನ್ಯ ಜನರಿಗೆ ಅರಿವು ಮೂಡಿಸಲಾಗುತ್ತಿದೆ.<br>➢ ಪ್ರಮುಖ ಮೊಬೈಲ್ ಸರ್ವೀಸ್ ಪ್ರೊವೈಡರ್‌ಗಳ ಮುಖಾಂತರ ಕರೆಗಳು ಸ್ವೀಕರಿಸುವ ಮೊದಲು ಸೈಬರ್ ಅಪರಾಧಗಳ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ.<br>➢ ಸೈಬರ್ ಅಪರಾಧಗಳನ್ನು ನಿಯಂತ್ರಿಸಲು ಸಾರ್ವಜನಿಕರಲ್ಲಿ ಮ್ಯೂಲ್ ಅಕೌಂಟ್ ಪರಿಣಾಮಗಳ ಬಗ್ಗೆ ಹಾಗೂ ಕಾನೂನು ಕ್ರಮಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ.<br>➢ ಹ್ಯಾಕಿಂಗ್ ಹಾಗೂ ಇತರೆ ಸೈಬರ್ ಅಪರಾಧ ಪ್ರಕರಣಗಳನ್ನು ಪತ್ತೆ ಹಚ್ಚಲು Drone Forensics, RAID Forensics, Wearable device forensics, Cloud forensics, Crypto currency tracing and investigation ನಂತಹ ಸುಧಾರಿತ ತರಬೇತಿಗಳನ್ನು ಹಾಗೂ ಅಧುನಿಕ ವಿದ್ಯುನ್ಮಾನ ತಾಂತ್ರಿಕ ಉಪಕರಣಗಳನ್ನು ಬಳಸಲು ಅಧಿಕಾರಿ/ಸಿಬ್ಬಂದಿಗಳಿಗೆ ವಿಶೇಷ ತರಬೇತಿಗಳನ್ನು ಸಹ ನೀಡಲಾಗುತ್ತಿದೆ. |

| | | |
|---|---|---|
| | | ➢ ರಾಜ್ಯದ ಅಪರಾಧ ತನಿಖಾ ಸಂಸ್ಥೆಯಲ್ಲಿ (CID), ಸೈಬರ್ ಅಪರಾಧ ತನಿಖೆ, ತರಬೇತಿ ಮತ್ತು ಸಂಶೋಧನೆ ಕೇಂದ್ರ (Centre for Cyber Crime Investigation, Training and Research) ಅನ್ನು ಸ್ಥಾಪಿಸಿ ಪೊಲೀಸ್ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಸಿಬ್ಬಂದಿಗಳಿಗೆ ಸೈಬರ್ ಅಪರಾಧಗಳನ್ನು ಬೇಧಿಸಲು ತರಬೇತಿಯನ್ನು ನೀಡಲಾಗುತ್ತಿದೆ.<br>➢ ಸಾಮಾಜಿಕ ಜಾಲತಾಣಗಳಾದ ವಾಟ್ಸ್‌ಆಪ್, ಫೇಸ್ ಬುಕ್,ಟ್ವಿಟರ್, ಇನ್ ಸ್ಟಾಗ್ರಾಮ್ , ಟೆಲಿಗ್ರಾಂ ಹಾಗೂ ಇತರ ಜಾಲತಾಣಗಳಲ್ಲಿ ಐಟಿ ಕಾಯ್ದೆ ಮತ್ತು ಐಟಿ ನಿಯಮಗಳನ್ನು ಉಲ್ಲಂಘಿಸುವ ಮತ್ತು ಸೈಬರ್ ಅಪರಾಧದಲ್ಲಿ ಭಾಗಿಯಾಗಿರುವ/ಭಾಗಿಯಾಗ ಬಹುದಾದ ಪೋಸ್ಟ್‌ಗಳನ್ನು ನಿಯಮಾನುಸಾರ ನೋಟೀಸ್ ಜಾರಿ ಮಾಡಿ ಜಾಲತಾಣದಿಂದ ತೆಗೆದು ಹಾಕುವ ಕ್ರಮಗಳನ್ನು ಕೇಂದ್ರ ಮತ್ತು ರಾಜ್ಯದ ಸಹಭಾಗಿತ್ವ ಸಂಸ್ಥೆಗಳ ಸಮನ್ವಯದೊಂದಿಗೆ ಕೈಗೊಳ್ಳಲಾಗುತ್ತಿದೆ.<br>➢ ಸಿ.ಐ.ಡಿ ಘಟಕದಲ್ಲಿರುವ Cyber Forensic Cell ನಿಂದ ಪ್ರತಿ ವರ್ಷವು ಸುಮಾರು 1500 ಸೈಬರ್ ಅಪರಾಧ ಪ್ರಕರಣಗಳಿಗೆ ವೈಜ್ಞಾನಿಕ ವರದಿಗಳನ್ನು ನೀಡಲಾಗುತ್ತಿದೆ.<br>➢ ಸರ್ಕಾರದ ಆದೇಶದ ಮೇರೆಗೆ 08 ಸೈಬರ್ ಸೆಕ್ಯೂರಿಟಿ ಅನಾಲಿಸ್ಟ್ ಹಾಗೂ 08 ಡಿಜಿಟಲ್ ಫಾರೆನ್ಸಿಕ್ ಅನಾಲಿಸ್ಟ್ ಒಟ್ಟು 16 ಸೈಬರ್ ತಾಂತ್ರಿಕ ತಜ್ಞರನ್ನು ಹೊರಗುತ್ತಿಗೆ ಆಧಾರದ ಮೇರೆಗೆ ನಿಯೋಜಿಸಲು ಆದೇಶ ನೀಡಲಾಗಿರುತ್ತದೆ.<br>➢ ಇದರಲ್ಲಿ 06 ಡಿಜಿಟಲ್ ಫಾರೆನ್ಸಿಕ್ ಅನಾಲಿಸ್ಟ್ ಹುದ್ದೆಗೆ 02 ಸೈಬರ್ ಸೆಕ್ಯೂರಿಟಿ ಅನಾಲಿಸ್ಟ್ ಹುದ್ದೆಗೆ ಒಟ್ಟು 08 ತಾಂತ್ರಿಕ ತಜ್ಞರನ್ನು ಪೊಲೀಸ್ ಆಯುಕ್ತರು ಬೆಂಗಳೂರು ನಗರ ಘಟಕಕ್ಕೆ ನೇಮಕ ಮಾಡಲಾಗಿರುತ್ತದೆ. |

**ಸಂಖ್ಯೆ: HD 61 PCQ 2025**

**(ಡಾ: ಜಿ. ಪರಮೇಶ್ವರ)**
ಗೃಹ ಸಚಿವರು

ಅನುಬಂಧ

ಐ.ಟಿ ಕಾಯ್ದೆ (ಸೈಬರ್ ಅಪರಾಧಗಳು) ಪ್ರಕರಣಗಳ ಸಂಖ್ಯೆ, ವಂಚನೆಯ ಮೊತ್ತ, ಜಪ್ತಿ, ಮತ್ತು ಹಿಂದಿರುಗಿಸಲಾಧ ಮೊತ್ತದ ವಿವರಗಳು. 2024

| SL No | Units Name | ಸೈಬರ್ ವಂಚನೆಯ ಪ್ರಕರಣಗಳ ಸಂಖ್ಯೆ | ಸೈಬರ್ ಅಪರಾಧಗಳಲ್ಲಿನ ವಂಚನೆಯ ಮೊತ್ತ ರೂ.ಗಳಲ್ಲಿ | ಸೈಬರ್ ವಂಚನೆಗೊಳಪಟ್ಟ ಮೊತ್ತದಲ್ಲಿ ರಿಕವರಿಯಾದ ಮೊತ್ತ ರೂ.ಗಳಲ್ಲಿ | ಹಿಂದಿರುಗಿಸಲಾದ ರಿಕವರಿ ಮೊತ್ತ ರೂ.ಗಳಲ್ಲಿ | ಬಂಧಿಸಲಾಗಿರುವ ಸೈಬರ್ ವಂಚಕರ ಸಂಖ್ಯೆ |
|---|---|---|---|---|---|---|
| 1 | ಬೆಂಗಳೂರು ನಗರ | 17693 | 19888895365 | 1693912597 | 1554676409 | 464 |
| 2 | ಮೈಸೂರು ನಗರ | 264 | 479505426 | 69198749 | 41668895 | 23 |
| 3 | ಹು-ಧಾರವಾಡ ನಗರ | 238 | 339848227 | 198909890 | 129428765 | 13 |
| 4 | ಮಂಗಳೂರು ನಗರ | 137 | 408609671 | 51473756 | 34779120 | 49 |
| 5 | ಬೆಳಗಾವಿ ನಗರ | 85 | 121524022 | 13078365 | 13078365 | 8 |
| 6 | ಕಲಬುರ್ಗಿ ನಗರ | 30 | 48988335 | 6650066 | 6650066 | 4 |
| 7 | ಎಸ್.ಪಿ. ಬೆಂಗಳೂರು | 718 | 1104338303 | 296135366 | 152987153 | 7 |
| 8 | ಎಸ್.ಪಿ. ತುಮಕೂರು | 324 | 256781620 | 125983989 | 22622649 | 21 |
| 9 | ಎಸ್.ಪಿ. ಕೋಲಾರ | 57 | 74880590 | 25791699 | 8441851 | 12 |
| 10 | ಎಸ್.ಪಿ. ಕೆ.ಜಿ.ಎಫ್ | 97 | 63340201 | 24222440 | 15350014 | 8 |
| 11 | ಎಸ್.ಪಿ. ಬೆಂಗಳೂರು ದಕ್ಷಿಣ | 200 | 152773777 | 4998814 | 4998814 | 19 |
| 12 | ಎಸ್.ಪಿ. ಚಿಕ್ಕಬಳ್ಳಾಪುರ | 189 | 124331599 | 134170004 | 23287187 | 20 |
| 13 | ಎಸ್.ಪಿ. ಮೈಸೂರು | 46 | 34808426 | 367714 | 319714 | 6 |
| 14 | ಎಸ್.ಪಿ. ಹಾಸನ | 130 | 127932517 | 27363967 | 15102306 | 0 |
| 15 | ಎಸ್.ಪಿ. ಚಾಮರಾಜನಗರ | 24 | 18996071 | 12478163 | 1609123 | 6 |
| 16 | ಎಸ್.ಪಿ. ಕೊಡಗು | 82 | 88643996 | 6429855 | 6326614 | 11 |
| 17 | ಎಸ್.ಪಿ. ಮಂಡ್ಯ | 53 | 40996849 | 3246710 | 1704552 | 3 |
| 18 | ಎಸ್.ಪಿ. ದಾವಣಗೆರೆ | 139 | 229415083 | 23595293 | 11851037 | 7 |
| 19 | ಎಸ್.ಪಿ. ಹಾವೇರಿ | 125 | 80170040 | 19349503 | 9538722 | 12 |
| 20 | ಎಸ್.ಪಿ. ಶಿವಮೊಗ್ಗ | 122 | 126192165 | 28944666 | 21688014 | 10 |
| 21 | ಎಸ್.ಪಿ. ಚಿತ್ರದುರ್ಗ | 40 | 58691051 | 17362159 | 16692379 | 10 |
| 22 | ಎಸ್.ಪಿ. ದಕ್ಷಿಣ ಕನ್ನಡ | 97 | 98919571 | 3714576 | 1784576 | 1 |
| 23 | ಎಸ್.ಪಿ. ಉತ್ತರ ಕನ್ನಡ | 77 | 74850022 | 17074805 | 16449772 | 4 |
| 24 | ಎಸ್.ಪಿ. ಚಿಕ್ಕಮಗಳೂರು | 92 | 68206456 | 1755416 | 1237500 | 3 |
| 25 | ಎಸ್.ಪಿ. ಉಡುಪಿ | 193 | 204906078 | 8642511 | 6313325 | 9 |
| 26 | ಎಸ್.ಪಿ. ಬೆಳಗಾವಿ | 55 | 90907016 | 49518451 | 31313262 | 5 |
| 27 | ಎಸ್.ಪಿ. ಗದಗ್ | 67 | 66331526 | 10199684 | 10199684 | 7 |
| 28 | ಎಸ್.ಪಿ. ವಿಜಯಾಪುರ | 80 | 216701609 | 157431346 | 139932086 | 14 |
| 29 | ಎಸ್.ಪಿ. ಧಾರವಾಡ | 63 | 23477181 | 14607593 | 5530330 | 4 |
| 30 | ಎಸ್.ಪಿ. ಬಾಗಲಕೋಟೆ | 47 | 53512056 | 11824934 | 4681858 | 0 |
| 31 | ಎಸ್.ಪಿ. ಕಲ್ಬುರ್ಗಿ | 31 | 8980351 | 315821251 | 315821251 | 4 |
| 32 | ಎಸ್.ಪಿ. ಬೀದರ್ | 37 | 20196534 | 19961680 | 25000 | 3 |
| 33 | ಎಸ್.ಪಿ. ಯಾದಗಿರಿ | 19 | 18146509 | 17555629 | 5997830 | 0 |
| 34 | ಎಸ್.ಪಿ. ಬಳ್ಳಾರಿ | 112 | 165898442 | 42055156 | 37960360 | 2 |
| 35 | ಎಸ್.ಪಿ. ರಾಯಚೂರು | 21 | 136411640 | 5791394 | 5791394 | 0 |
| 36 | ಎಸ್.ಪಿ. ಕೊಪ್ಪಳ | 24 | 16782342 | 1100000 | 1100000 | 2 |
| 37 | ಎಸ್.ಪಿ. ವಿಜಯನಗರ | 18 | 20959053 | 1491083 | 99000 | 0 |
| 38 | ಎಸ್.ಪಿ. ರೈಲ್ವೇಸ್ | 0 | 0 | 0 | 0 | 0 |
| | ಒಟ್ಟು | 21826 | 25154849720 | 3462209274 | 2677038977 | 771 |

ಅನುಬಂಧ

ಐ.ಟಿ ಕಾಯ್ದೆ (ಸೈಬರ್ ಅಪರಾಧಗಳು) ಪ್ರಕರಣಗಳ ಸಂಖ್ಯೆ, ವಂಚನೆಯ ಮೊತ್ತ, ಜಪ್ತಿ, ಮತ್ತು ಹಿಂದಿರುಗಿಸಲಾಧ ಮೊತ್ತದ ವಿವರಗಳು. 2025 (ಜುಲೈ )

| SL No | Units Name | ಸೈಬರ್ ವಂಚನೆಯ ಪ್ರಕರಣಗಳ ಸಂಖ್ಯೆ | ಸೈಬರ್ ಅಪರಾಧಗಳಲ್ಲಿನ ವಂಚನೆಯ ಮೊತ್ತ ರೂ.ಗಳಲ್ಲಿ | ಸೈಬರ್ ವಂಚನೆಗೊಳಪಟ್ಟ ಮೊತ್ತದಲ್ಲಿ ರಿಕವರಿಯಾದ ಮೊತ್ತ ರೂ.ಗಳಲ್ಲಿ | ಹಿಂದಿರುಗಿಸಲಾದ ರಿಕವರಿ ಮೊತ್ತ ರೂ.ಗಳಲ್ಲಿ | ಬಂಧಿಸಲಾಗಿರುವ ಸೈಬರ್ ವಂಚಕರ ಸಂಖ್ಯೆ |
|---|---|---|---|---|---|---|
| 1 | ಬೆಂಗಳೂರು ನಗರ | 6200 | 10428872189 | 725273175 | 332004798 | 234 |
| 2 | ಮೈಸೂರು ನಗರ | 96 | 228931577 | 15747019 | 16670214 | 8 |
| 3 | ಹು-ಧಾರವಾಡ ನಗರ | 86 | 62750899 | 17710818 | 12862500 | 5 |
| 4 | ಮಂಗಳೂರು ನಗರ | 72 | 193668207 | 10922288 | 7524071 | 20 |
| 5 | ಬೆಳಗಾವಿ ನಗರ | 44 | 51308295 | 5873238 | 5873238 | 0 |
| 6 | ಕಲಬುರ್ಗಿ ನಗರ | 24 | 57235817 | 2060900 | 2060900 | 1 |
| 7 | ಎಸ್.ಪಿ. ಬೆಂಗಳೂರು | 220 | 320493034 | 47138010 | 13296288 | 3 |
| 8 | ಎಸ್.ಪಿ. ತುಮಕೂರು | 160 | 145558519 | 23140459 | 7862433 | 3 |
| 9 | ಎಸ್.ಪಿ. ಕೋಲಾರ | 30 | 24017801 | 2578127 | 50000 | 2 |
| 10 | ಎಸ್.ಪಿ. ಕೆ.ಜಿ.ಎಫ್ | 52 | 33335695 | 10323584 | 3348423 | 1 |
| 11 | ಎಸ್.ಪಿ. ಬೆಂಗಳೂರು ದಕ್ಷಿಣ | 96 | 64973026 | 1961499 | 1961499 | 12 |
| 12 | ಎಸ್.ಪಿ. ಚಿಕ್ಕಬಳ್ಳಾಪುರ | 107 | 126765255 | 70685336 | 15704312 | 4 |
| 13 | ಎಸ್.ಪಿ. ಮೈಸೂರು | 24 | 11507074 | 190000 | 0 | 2 |
| 14 | ಎಸ್.ಪಿ. ಹಾಸನ | 49 | 37851144 | 20509761 | 3877764 | 0 |
| 15 | ಎಸ್.ಪಿ. ಚಾಮರಾಜನಗರ | 10 | 10097256 | 1279317 | 136336 | 2 |
| 16 | ಎಸ್.ಪಿ. ಕೊಡಗು | 54 | 69973900 | 3563728 | 3563728 | 0 |
| 17 | ಎಸ್.ಪಿ. ಮಂಡ್ಯ | 27 | 32777776 | 1909545 | 472994 | 3 |
| 18 | ಎಸ್.ಪಿ. ದಾವಣಗೆರೆ | 60 | 82733622 | 21763358 | 13015151 | 1 |
| 19 | ಎಸ್.ಪಿ. ಹಾವೇರಿ | 54 | 23427787 | 5294867 | 3310604 | 5 |
| 20 | ಎಸ್.ಪಿ. ಶಿವಮೊಗ್ಗ | 52 | 80840317 | 7668185 | 4169447 | 2 |
| 21 | ಎಸ್.ಪಿ. ಚಿತ್ರದುರ್ಗ | 12 | 19351389 | 1165890 | 1165890 | 0 |
| 22 | ಎಸ್.ಪಿ. ದಕ್ಷಿಣ ಕನ್ನಡ | 62 | 73921070 | 1027193 | 940193 | 6 |
| 23 | ಎಸ್.ಪಿ. ಉತ್ತರ ಕನ್ನಡ | 35 | 73066186 | 9870729 | 3877681 | 1 |
| 24 | ಎಸ್.ಪಿ. ಚಿಕ್ಕಮಗಳೂರು | 38 | 28009000 | 7191000 | 1926000 | 1 |
| 25 | ಎಸ್.ಪಿ. ಉಡುಪಿ | 100 | 119417359 | 2768218 | 1603172 | 2 |
| 26 | ಎಸ್.ಪಿ. ಬೆಳಗಾವಿ | 30 | 32209179 | 4639310 | 1374780 | 2 |
| 27 | ಎಸ್.ಪಿ. ಗದಗ್ | 30 | 39725721 | 2461026 | 2461026 | 12 |
| 28 | ಎಸ್.ಪಿ. ವಿಜಯಾಪುರ | 238 | 114534610 | 21541303 | 11443332 | 5 |
| 29 | ಎಸ್.ಪಿ. ಧಾರವಾಡ | 19 | 8410795 | 2095560 | 666499 | 8 |
| 30 | ಎಸ್.ಪಿ. ಬಾಗಲಕೋಟೆ | 15 | 63108710 | 5541522 | 2681222 | 4 |
| 31 | ಎಸ್.ಪಿ. ಕಲ್ಬುರ್ಗಿ | 15 | 8525685 | 183622 | 183622 | 4 |
| 32 | ಎಸ್.ಪಿ. ಬೀದರ್ | 6 | 30695880 | 26344111 | 154923 | 0 |
| 33 | ಎಸ್.ಪಿ. ಯಾದಗಿರಿ | 18 | 17912374 | 2632049 | 2632049 | 0 |
| 34 | ಎಸ್.ಪಿ. ಬಳ್ಳಾರಿ | 50 | 91177686 | 8910850 | 8757050 | 4 |
| 35 | ಎಸ್.ಪಿ. ರಾಯಚೂರು | 6 | 19296770 | 1382641 | 1382641 | 0 |
| 36 | ಎಸ್.ಪಿ. ಕೊಪ್ಪಳ | 11 | 20621457 | 0 | 0 | 0 |
| 37 | ಎಸ್.ಪಿ. ವಿಜಯನಗರ | 20 | 27986793 | 299000 | 0 | 0 |
| 38 | ಎಸ್.ಪಿ. ರೈಲ್ವೇಸ್ | 0 | 0 | 0 | 0 | 0 |
| | ಒಟ್ಟು | 8222 | 12875089854 | 1093647238 | 489014780 | 357 |